ಎಂದೂ ಹೊಗಳುತ್ತ ಆಕೆ ಆ ಜವಾಬ್ದಾರಿಯನ್ನು ಪ್ರೀತಿಸುವಂತೆ ಮಾಡಲಾಗುತ್ತದೆ ಎಂದು ಹೇಳುತ್ತಾರೆ ಸಂಪ್ರತಿ.

'ತಾನು ಮಗುವನ್ನು ಸರಿಯಾಗಿ ಬೆಳೆಸಲಿಲ್ಲ', 'ತಾನು ಮಗುವಿಗೆ ಸಾಕಷ್ಟು ಸಮಯ ಕೊಡಲಿಲ್ಲ', 'ಮಗುವಿಗೆ ಹೋಮ್ ವರ್ಕ್ ಮಾಡಿಸಲಿಲ್ಲ', 'ಸ್ಕೂಲ್‌ಡೇಗೆ ಮಗುವನ್ನು ಸಿದ್ಧಪಡಿಸಲಿಲ್ಲ', 'ಭರತನಾಟ್ಯ ತರಗತಿಯಲ್ಲಿ ಆಕೆಗೆ ವಿಶೇಷ ಕಾರ್ಯಕ್ರಮದ ಅವಕಾಶ ದೊರೆತರೂ ಬೇಡವೆಂದು ಹೇಳಿ ತಪ್ಪು ಮಾಡಿದೆನೇ...' ಹೀಗೆ ಕೊರಗಿನ ಭಾರವು ಆಕೆಯ ಹೆಗಲ ಮೇಲೆ ಆಕ್ಟೋಪಸ್‌ನಂತೆ ಕುಳಿತಿರುತ್ತದೆ.

ಬದಲಾದ ಸಂದರ್ಭದಲ್ಲಿ ಅಡುಗೆಮನೆಯ ಸೌಕರ್ಯಗಳು ಗೃಹಿಣಿಗೆ ಸಹಕಾರಿಯಾಗಿದ್ದಂತೆ ತೋರಿದರೂ, ಅವು ಆಕೆಯ ಹೆಗಲ ಮೇಲಿನ ಜವಾಬ್ದಾರಿಯನ್ನೂ ಹೆಚ್ಚಿಸಿವೆ. ದಿನವೊಂದರಲ್ಲಿ ತಿಂಡಿ ಮತ್ತು ಅನ್ನ ಸಾಂಬಾರ್, ಪಲ್ಯಕ್ಕೆ ಸೀಮಿತವಾಗಿದ್ದ ಅಡುಗೆಮನೆಯಲ್ಲಿ ಈಗ ಥರಾವರಿ ತಿಂಡಿಯ ಪಟ್ಟಿಯೇ ಕುಳಿತಿರುತ್ತದೆ. ಇಂತಹ ಜಂಜಡಗಳ ನಡುವೆ ತನ್ನ ಬೇಕು ಬೇಡಗಳನ್ನು ನೋಡಿಕೊಂಡು ಮಕ್ಕಳನ್ನು ನೋಡಿಕೊಳ್ಳುವ ಹೊಣೆ ಚಿಕ್ಕದಲ್ಲ, ಸುಲಭದ್ದೂ ಅಲ್ಲ. ಹಿಂದಿನ ಕಾಲದಲ್ಲಿ ಮಕ್ಕಳನ್ನು ಸಾಕಿ ಸಲಹುವ ಕ್ರಮಕ್ಕೂ ಇಂದಿನ ಕಾಲದ ಪಾಲನೆ ಪೋಷಣೆಯ ಕ್ರಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

## ತಾಯಿ ದೇವರು, ದೇವರೇ ಎಲ್ಲವೂ ಅಲ್ಲ

ಹಿಂದಿನ ಕಾಲದಲ್ಲಿ ಐದಾರು ಮಕ್ಕಳನ್ನು ಹಡೆದ ಅಮ್ಮಂದಿರು ತಮ್ಮ ಮಕ್ಕಳ ಅಗತ್ಯಗಳನ್ನು ಗ್ರಹಿಸದೇ ಆರಾಮವಾಗಿದ್ದರು ಎಂದೇನೂ ಅಲ್ಲ ಎನ್ನುವ ಲೇಖಕಿಯೂ ಆಗಿರುವ ಡಾ. ಎಚ್. ಎಸ್. ಅನುಪಮಾ, 'ತಾಯಿಯೇ ದೇವರು' ಎಂಬ ಭಾರತೀಯ ಗ್ರಹಿಕೆಯನ್ನು ವಿಶ್ಲೇಷಿಸುತ್ತಾ ಕೆಲವು ಅಂಶಗಳನ್ನು ವಿವರಿಸುತ್ತಾರೆ.


'ತಾಯಿಯೇ ದೇವರು ಎಂದು ಒಪ್ಪಿಕೊಳ್ಳೋಣ. ಬೆಳೆದು ದೊಡ್ಡವರಾದ ಮಕ್ಕಳು ಅಮ್ಮನನ್ನು ಗೌರವಿಸಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಎಂಟು, ಹತ್ತು ಮಕ್ಕಳನ್ನು ಹಡೆದ ಅಮ್ಮಂದಿರಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಲು ಎಲ್ಲಿಯೂ ಅವಕಾಶವೇ ಇರಲಿಲ್ಲ. ಅವಕಾಶವಿದ್ದಿದ್ದರೆ ಖಂಡಿತಾ ತಮ್ಮ ಅಂತರಂಗದ ಬೇನೆ ಬೇಸರವನ್ನು ಹೇಳಿಕೊಳ್ಳುತ್ತಿದ್ದರು. ಉದಾಹರಣೆಗೆ, ಹೆಂಡತಿಯಾದವಳು ಹೆಣ್ಣುಮಕ್ಕಳನ್ನೇ ಹೆತ್ತರೆ ಸಿಟ್ಟು ಮಾಡಿಕೊಳ್ಳುವ ಗಂಡ, ಬೇರೊಂದು ಹುಡುಗಿಯನ್ನು ಮದುವೆಯಾಗುವುದು ವಾಡಿಕೆಯಾಗಿತ್ತು. ಹಾಗೆ ಹೆಣ್ಣು ಹೆತ್ತ ತಾಯಿಯೂ ದೇವರೇ ಅಲ್ಲವೇ? ಆಕೆಯ ಅನಿಸಿಕೆ ಅಭಿಪ್ರಾಯಗಳನ್ನು ಹೇಳಲು ಅವಕಾಶವೆಲ್ಲಿತ್ತು? ಮಕ್ಕಳ ಹುಟ್ಟನ್ನು ನಿಯಂತ್ರಿಸುವ ಅವಕಾಶವಿಲ್ಲದೆ ಇದ್ದಾಗ, ಆರೋಗ್ಯದ ಸಮಸ್ಯೆಯಾಗಲೀ, ಭಾವನಾತ್ಮಕ ಸಮಸ್ಯೆಯಾಗಲೀ, ಸಾಮಾಜಿಕ ತೊಡಕುಗಳಾಲೀ, ಎಲ್ಲವನ್ನೂ ಮಹಿಳೆಯೇ ಏಕಾಂಗಿಯಾಗಿಯೇ ಎದುರಿಸಬೇಕಾಗಿತ್ತು. ಗರ್ಭಪಾತವಾದಲ್ಲಿ, ಹೆರಿಗೆಯಾಗಿ ಮಗುವು ತೀರಿಕೊಂಡ ಸಂದರ್ಭದಲ್ಲಿ ಆಕೆಯ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಳಜಿ ಮಾಡಲು ಆಕೆಯ ಬಳಿ ಯಾರಿದ್ದರು? ತೌರುಮನೆಯಲ್ಲಿ ತುಸು ಪ್ರೀತಿ ಕಾಳಜಿ ದೊರೆಯುತ್ತಿದ್ದರೂ ಮರಳಿ ಗಂಡನ ಮನೆಗೆ ಬಂದು ದುಡಿಮೆಗೆ ನಿಲ್ಲುವುದು ಅನಿವಾರ್ಯವಾಗಿತ್ತವಳಿಗೆ. ಬೇಕೋ ಬೇಡವೋ, ಮತ್ತೆ ಗರ್ಭ ಧರಿಸುವುದು ಅನಿವಾರ್ಯವೇ ಆಗಿತ್ತು. ತನ್ನ ಅನಿಸಿಕೆ ಅಭಿಪ್ರಾಯಗಳನ್ನು ಹೇಳುವುದೇ ನಿಷಿದ್ಧವಾಗಿತ್ತು. ಅಂತಹ ಕಾಲವು ಬಹು ಹಳೆಯದ್ದೇನೂ ಅಲ್ಲ. ನಮ್ಮ ತಲೆಮಾರಿನ ನಿಕಟಪೂರ್ವ ತಲೆಮಾರಿನ ಮಹಿಳೆಯರು, ನಮ್ಮ ಅಮ್ಮ ಅಜ್ಜಿಯರು ಇದನ್ನೆಲ್ಲ ಅನುಭವಿಸಿದ್ದರು ಎನ್ನುವುದನ್ನು ಹೇಗೆ ಮರೆಯಲಾದೀತು? ಅಂಥ ಕಥೆಗಳನ್ನೆಲ್ಲ ಕೇಳಿದ ಮಹಿಳೆಯರು ಇಂದು ಮಕ್ಕಳನ್ನು ಹೆರುವ ನಿರ್ಧಾರ ಮಾಡುವ ಮುನ್ನ ಹಲವು ಬಾರಿ ಯೋಚಿಸುತ್ತಿದ್ದಾರೆ.'

ಡಾ. ಅನುಪಮಾ ಅವರ ಮಾತುಗಳು, ನಾಗರಿಕತೆಯ ಹೊಳೆಯಲ್ಲಿ ಹೊಸ ನೀರು ಬಂದರೂ ತಾಯ್ತನಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗದಿರುವುದನ್ನು ಸೂಚಿಸುತ್ತವೆ.

## ಮದರ್‌ಹುಡ್ ಪೆನಾಲ್ಟಿ!

ಇಂದು ಮಹಿಳೆಯು ನಿಧಾನವಾಗಿ ಸ್ವಾವಲಂಬಿಯಾಗುವತ್ತ ಹೆಜ್ಜೆಯಿರಿಸುತ್ತಿದ್ದಾಳೆ. ಆರ್ಥಿಕ ಸ್ವಾವಲಂಬನೆಯ ಹಾದಿಯನ್ನು ಕಂಡುಕೊಂಡಿದ್ದಾಳೆ. ಎಷ್ಟೋ ಸಂದರ್ಭಗಳಲ್ಲಿ





ಮಗುವೊಂದನ್ನು ಪಡೆಯುವ ಪ್ರಕ್ರಿಯೆ ದಿನೇ ದಿನೇ ಸಂಕೀರ್ಣವೆನಿಸುತ್ತಿದೆ. ಇಂದು ಸೌಕರ್ಯಗಳು ಹೆಚ್ಚಾಗಿವೆ. ಅವಕಾಶಗಳೂ ಹೆಚ್ಚಾಗಿವೆ. ಇಂತಹ ಸಂದರ್ಭಗಳಲ್ಲಿ ನಿರ್ಧಾರಗಳನ್ನು ಮಾಡುವುದು ಸುಲಭವಲ್ಲ. ಮಾಹಿತಿಯ ಮಹಾಪೂರದ ನಡುವೆ ಜ್ಞಾನವನ್ನು ಗುರುತಿಸುವುದು ಕಷ್ಟವಾಗುತ್ತಿದೆ. ಆದಾಗ್ಯೂ ಮನೆಗೆ ಮಗುವನ್ನು ಬರಮಾಡಿಕೊಳ್ಳುವ ಬಗ್ಗೆ ದಂಪತಿಗಳಿಬ್ಬರೂ ಕೂಡಿ ನಿರ್ಧಾರ ಮಾಡುವುದು ಮುಖ್ಯ. ಅದರಲ್ಲಿಯೂ ಹೆಣ್ಣಿನ ಆಯ್ಕೆಯನ್ನು ಗೌರವಿಸುವ ಪರಿಪಾಠ ಬೆಳೆಯಬೇಕು. ಪ್ರತಿಯೊಂದು ಜೀವಿಗೂ ಈ ಸಮಾಜದಲ್ಲಿ ತನ್ನದೇ ಆದ ಪಾತ್ರವಿದೆ. ಈ ಗೌರವ ನಡವಳಿಕೆಯಿದ್ದಾಗ, ಕ್ಷೇಮ ಭಾವವಿದ್ದಾಗ ಮಗುವನ್ನು ಬರಮಾಡಿಕೊಳ್ಳುವ ವಿಶ್ವಾಸವೂ ಮೂಡುತ್ತದೆ ಎಂದು ಅನಿಸುತ್ತದೆ. ಆದ್ದರಿಂದ ಸಾಮಾಜಿಕ ಸಂರಚನೆಯಲ್ಲಿ ಒಳಿತನ್ನೇ ಪ್ರಧಾನವಾಗಿ ಉಳಿಸಿಕೊಳ್ಳುವ ತಕ್ಷಣದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

—ಪ್ರೊ. ಶ್ರೀಧರ ಮೂರ್ತಿ, ಮನಶಾಸ್ತ್ರಜ್ಞರು